# ಸತ್ಯ ಜಗತಿದು ಪಂಚಭೇದವು ನಿತ್ಯ ಶ್ರೀ ಗೋವಿಂದನ

1. Ref.: Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Note:** The wordings, given without highlights, are as per book in Ref. 1 above. The wordings in Ref. 2 are slightly different (differences are marked in yellow highlights) with respect to book in Ref.1 above. The wordings followed by the singer are not matching fully with both the reference books.
4. **Note:** Please refer "Kaksha Taratamya" under "Adhyatma Chintane" in "References Menu Bar" in Home Page of this website.

ರಾಗ: ಸೌರಾಷ್ಟ್ರ ತಾಳ: ತ್ರಿವಿಡೆ

ಸತ್ಯ ಜಗಕಿದು ಪಂಚ ಭೇದವು ನಿತ್ಯ ಶ್ರೀ ಗೋವಿಂದನ
(ಕೃತ್ಯ ವರಿತು) (ಕೃತ್ಯ ತಿಳಿದು) ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ ॥ ಪ ॥

ಜೀವ ಈಶಗೆ ಭೇದ ಸರ್ವತ್ರ
ಜೀವ ಜೀವಕೆ ಭೇದವು
(ಜೀವ ಜಡರೊಳು ಭೇದ ಜಡರೊಳು
ಭೇದ ಜಡ ಪರಮಾತ್ಮಗೆ) ॥ 1 ॥
(ಜೀವ ಜಡಕೆ ಜಡ ಜಡಕೆ
ಭೇದ ಜಡ ಪರಮಾತ್ಮಗೆ)

ಮಾನುಷೋತ್ತಮರಧಿಕ ಕ್ಷಿತಿಪರು
ಮನುಜ ದೇವ ಗಂಧರ್ವರು
(ಜಾನಪಿತರಽಜಾನ ಕರ್ಮಜ
ದಾನವಾರಿ ತತ್ತ್ವೇಷರು) ॥ 2 ॥
(ಜಾನಪಿತರಽಜಾನ ಕರ್ಮರು
ಉಕ್ತ ಶೇಷ ಶತಸ್ಥರು)

ಗಣಪ ಮಿತ್ರರು ಸಪ್ತ ಋಷಿಗಳು
ವಹ್ನಿ ನಾರದ ವರುಣನು
ಇನಜಗೆ ಸಮ ಚಂದ್ರ ಸೂರ್ಯರು
ಮನುಸುತೆಯು ಹೆಚ್ಚು ಪ್ರವಹನು || 3 ||

ದಕ್ಷ ಸಮ ಅನಿರುದ್ಧ ಗುರು ಶಚಿ
ರತಿ ಸ್ವಾಯಂಭುವರಾರ್ವರು
ಕಕ್ಷ ಪ್ರಾಣನಿಗಿಂತ ಕಾಮನು
ಕಿಂಚಿದಧಿಕನು ಇಂದ್ರನು || 4 ||

ದೇವ ಇಂದ್ರನಿಗಧಿಕ ಮಹಾರುದ್ರ
ದೇವರಿಗೆ ಸಮ ಗರುಡನು
ಕೇವಲವು ಈ ಶೇಷ ರುದ್ರರು
ದೇವಿ ಹೆಚ್ಚು ಸರಸ್ವತಿ || 5 ||
(ದೇವೇಂದ್ರನಿಂದಧಿಕ ಮಹರುದ್ರ
ರುದ್ರ ಸಮ ಶೇಷ ಗರುಡರು
ಗರುಡ ಶೇಷರಿಗಧಿಕರೆನಿಪರು
ದೇವಿ ಭಾರತಿ ಸರಸ್ವತಿ)

ವಾಯುವಿಗೆ ಸಮರಿಲ್ಲ ಜಗದೊಳು
ವಾಯು ದೇವರೆ ಬ್ರಹ್ಮರು
(ವಾಯು ಮುಕ್ತಗೆ ಕೋಟಿ ಗುಣದಿಂ -
ದಧಿಕ ಶಕ್ತಳು ಶ್ರೀ ರಮಾ) || 6 ||
(ವಾಯು ಬ್ರಹ್ಮಗೆ ಕೋಟಿ ಗುಣದಿಂದ
ಅಧಿಕ ಶಕ್ತಳು ಶ್ರೀ ರಮಾ)

ಅನಂತ ಗುಣದಿಂ ಲಕುಮಿಗಧಿಕನು
ಶ್ರೀ ಪುರಂದರ ವಿಠಲನು
ಘನ ಸಮರು (ಇಲ್ಲ) (ಇವಗಿಲ್ಲ) ಜಗದೊಳು
ಹನುಮ ಹೃತ್-ಪದ್ಮವಾಸಿಗೆ || 7 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

[ಈ ಪದದಲ್ಲಿ ದ್ವೈತಸಿದ್ಧಾಂತದ ಮುಖ್ಯ ಪ್ರಮೇಯಗಳಾದ ಪಂಚಭೇದ ಮತ್ತು ದೇವತಾತಾರತಮ್ಯ ಇವುಗಳ ಉಲ್ಲೇಖವಿದೆ. ಮೊದಲ ಎರಡು ನುಡಿಗಳಲ್ಲಿ ಪಂಚಭೇದ, ಮುಂದೆ ಐದು ನುಡಿಗಳಲ್ಲಿ ಆರೋಹಣ ತಾರತಮ್ಯಕ್ರಮ ಇವನ್ನು ಹೇಳಿದ್ದಾರೆ.]

**ಕೃತ್ಯ ತಿಳಿದು / ಅರಿತು** = ಪರಮಾತ್ಮನ ಲೀಲೆಗಳನ್ನು ತಿಳಿದುಕೊಂಡು

**ತಾರತಮ್ಯದಿ ಕೃಷ್ಣನಧಿಕೆಂದು ಸಾರಿರೈ** = ತಾರತಮ್ಯದ ಮೂಲಕ ವಿಷ್ಣು ಸರ್ವೋತ್ತಮನೆಂದು ಸಾರಿರಿ

**ಸರ್ವತ್ರ** = ಸಂಸಾರದಲ್ಲಿಯೂ, ಮುಕ್ತಿಯಲ್ಲಿಯೂ

**ಪಂಚ ಭೇದ** = ೧) ಜೀವ - ಈಶ ಭೇದ, ೨) ಜೀವ - ಜೀವ ಭೇದ, ೩) ಜೀವ - ಜಡ ಭೇದ, ೪) ಜಡ - ಜಡ ಭೇದ ಮತ್ತು ೫) ಜಡ - ಈಶ ಭೇದ

**ಸತ್ಯ ಜಗತಿದು...** – 'ವಿಶ್ವಂ ಸತ್ಯಂ ವಶೇ ವಿಷ್ಣೋಃ' ಎಂಬ ಆಚಾರ್ಯರ ವಾಕ್ಯದ ಕನ್ನಡ ರೂಪ.

**ತಾರತಮ್ಯದಿ...** – ದೇವತಾ ತಾರತಮ್ಯದ ಪ್ರಯೋಜನವು ಹರಿಸರ್ವೋತ್ತಮತ್ವವನ್ನು ಸಾದಿಸುವುವೇ ಆಗಿದೆ.

**ಜೀವ ಈಶಗೆ...** – ಪಂಚಭೇದದ ವಿವರ. 'ಪರಮಶ್ರುತಿ'ಯ ಒಕ್ಕಣೆ – 'ಜೀವೇಶ್ವರಭಿದಾ,' 'ಜಡೇಶ್ವರಭಿದಾ,' 'ಜೀವಭೇದೋ ಮಿಥಃ,' 'ಜಡಜೀವಭಿದಾ,' 'ಮಿಥಃ ಜಡಭೇದಃ' ಎಂಬುದರ ಸರಳ ನಿರೂಪಣೆ ಇಲ್ಲಿದೆ.

**ಜಾನಪಿತರಜಾನ...** – ಇಲ್ಲೊಂದು ಪಾಠಾಂತರವಿದೆ– 'ಜಾನಪಿತರಜಾನಕರ್ಮಜ ದರ್ಾನವಾರಿ ತತ್ತ್ವೇಶರು.' ಮನುಜ ಗಂಧರ್ವರು ಮೂವತ್ತೊಂದನೆಯ ಕಕ್ಷೆಯವರು; ಅವರ ಮೇಲೆ (ಎಂದರೆ ಅವರಿಗಿಂತ ಉತ್ತಮರು) ದೇವಗಂಧರ್ವರು, ಅವರ ಮೇಲೆ ಚಿರಪಿತೃಗಳು ಇವರನ್ನೇ ಇಲ್ಲಿ 'ಜಾನಪಿತರು' ಎಂದು ಕರೆಯಲಾಗಿದೆ (ಇಪ್ಪತ್ತೊಂಬತ್ತನೆಯ ಕಕ್ಷೆ). ಅವರ ಮೇಲೆ ಅಜಾನಜೇಯಾ ಧಮರು (ಶತೋನ ಶತಕೋಟಿ ಋಷಿಗಳು); ಇವರನ್ನು 'ಅಜಾನಜ ಕರ್ಮರು' ಎಂದು ಇಲ್ಲಿ ಕರೆದಿದ್ದಾರೆ. ಈ ಇಪ್ಪತ್ತೆಂಟನೆಯ ಕಕ್ಷೆಯಾದ ಮೇಲೆ 'ಶೇಷಶತಸ್ಥರು' ಎಂಬ ನೂರು ದೇವತೆಗಳು ಹದಿನೆಂಟನೆಯ ಕಕ್ಷೆಗೆ ಸೇರಿದವರು. ಇವರಲ್ಲಿ ಅಷ್ಟ ವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಏಕೋನಪಂಚಾಶತ್ ಮರುತ್ತುಗಳು ದಶವಿಶ್ವೇದೇವತೆಗಳು ಮೊದಲಾದವರು ಸೇರುತ್ತಾರೆ.

**ಗಣಪ ಮಿತ್ರರು...** – ಗಣಪತಿಯೂ ಶೇಷಶತಸ್ಥರ ಕಕ್ಷೆಯಲ್ಲೇ ಸೇರಿದವನು, ಆದರೆ ಅವರಿಗಿಂತ ಉತ್ತಮ. ಆಕಾಶಾಭಿಮಾನಿಯಾಗಿ ಮುಖ್ಯತತ್ತ್ವೇಶರ ಎಣಿಕೆಯಲ್ಲಿ ಬಂದವನು. ಮಿತ್ರ (ಆದಿತ್ಯ) ಅವನಿಗಿಂತ ಉತ್ತಮ,

ಹದಿನೇಳನೆಯ ಕಕ್ಷೆ; ಸಪ್ತಋಷಿಗಳು (ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ಇವರು ಸ್ವಾಯಂಭುವ ಮನ್ವಂತರದವರು; ಮಹಾಭಾರತದ ಶಾಂತಿಪರ್ವದಲ್ಲಿ ಇವರ ಉಲ್ಲೇಖವಿದೆ; ವೈವಸ್ವತ ಮನ್ವಂತರದಲ್ಲಿ ವಿಶ್ವಾಮಿತ್ರ, ಜಮದಗ್ನಿ, ಭರದ್ವಾಜ, ಗೌತಮ, ಅತ್ರಿ, ವಸಿಷ್ಠ, ಕಶ್ಯಪ ಇವರು ಸಪ್ತರ್ಷಿಗಳು).

**ವಹ್ನಿ** – ಪ್ರಧಾನಾಗ್ನಿ.

**ಇನಜ** – ಯಮಧರ್ಮ.

**ಸುತೆ** = ಮಗಳು, ಸುತಾ, ಕುವರಿ, ಕುಮಾರಿ
**ಮನುಸುತೆಯು** – ಶತರೂಪಾದೇವಿ.

(ಕಕ್ಷ ತಾರತಮ್ಯದ ಪ್ರಕಾರ ಮನುಸತಿ ಹೆಚ್ಚು ಸಮಂಜಸವೆನಿಸುತ್ತದೆ. ೧೨ ನೇ ಕಕ್ಷೆಯಲ್ಲಿ ಚಂದ್ರ ಸೂರ್ಯರ ಜೊತೆ ಶತರೂಪಾದೇವಿ (ಸ್ವಾಯಂಭುವ ಮನುವಿನ ಪತ್ನಿ) ಬರುತ್ತಾರೆ. ಇವರಕ್ಕಿಂತ ಹೆಚ್ಚು ೧೧ ನೇ ಕಕ್ಷೆಯಲ್ಲಿ ಪ್ರವಹವಾಯು ಇದ್ದಾರೆ. ೧೫ ನೇ ಕಕ್ಷೆಯಲ್ಲಿ ಬರುವ **ಮನುಸುತೆ** (**ಮನುವಿನ ಮಗಳು**) ಪ್ರಸೂತಿ ದೇವಿ. ಹೀಗೆ ತೆಗೆದುಕೊಂಡರೆ ತುಂಬಾ ಗೊಂದಲವಾಗುತ್ತದೆ.
(ಸ್ವಾಯಂಭುವ ಮನುವಿಗೆ ಮೂರು ಜನ ಹೆಣ್ಣು ಮಕ್ಕಳು – ಆಕೂತಿ, ದೇವಭೂತಿ ಮತ್ತು ಪ್ರಸೂತಿ. ಹರಿಕಥಾಮೃತಸಾರದಲ್ಲಿ ಆಕೂತಿ – ದೇವಭೂತಿಯರ ಕಕ್ಷೆ ಬಗ್ಗೆ ತೆಗೆದುಕೊಂಡಿಲ್ಲ. ಪ್ರಸೂತಿ ದೇವಿಯು ದಕ್ಷ ಪ್ರಜಾಪತಿಯ ಹೆಂಡತಿ ಅಂದರೆ ರುದ್ರ ದೇವರ ಅತ್ತೆ. ಹೀಗೆ ತೆಗೆದುಕೊಂಡರೆ ತುಂಬಾ ಗೊಂದಲವಾಗುತ್ತದೆ.)

**ಪ್ರವಹನು** – ಪ್ರವಹವಾಯು, ಭೂತವಾಯುವಿನ ಪ್ರಧಾನಾಭಿಮಾನಿ, ಜಡ.

**ಕಕ್ಷಪ್ರಾಣ** – ತೈಜಸಾಹಂಕಾರದಿಂದ ಉದ್ಭೂತವಾದ ಪ್ರಾಣ.

**ಹನುಮ ಹೃತ್ಪದ್ಮವಾಸಿ** – ಮಧ್ವಾಚಾರ್ಯರ ಹೃದಯದಲ್ಲಿ ನೆಲೆಸಿದ ಹರಿ.

**Classification:** Keerthane
**Ankita:** sri purandara vittala
**Location:** NA
**Category:** Taratamya
**Group Words:** Vishnu, Ananta, paramatma, Lakshmi, deva, devi, taratamya, hrudaya, satya, Krishna, adhika, jiva, jada, hanuma, kaksha
**Pravachana:** NA
**Explanation:** Unknown